# ಶ್ರೇಷ್ಠರು

■ ಜಯಂತಿ ರಾಘವೇಂದ್ರ, ಆಗುಂಬೆ
ಕಲೆ: ಸಂತೋಷ್ ಸಸಿಹಿತ್ಲು



ಕತ್ತರಿ, ಸೂಜಿ, ಬಟ್ಟೆ ಆಗಾಗ ಭೇಟಿಯಾಗುತ್ತಿದ್ದವು, ಅವುಗಳು ಭೇಟಿಯಾದಾಗ ಒಂದಿಷ್ಟು ಕುಶಲೋಪರಿ, ಆರೋಗ್ಯ, ಊರಿನ ಸಮಾಚಾರ ಇತ್ಯಾದಿಗಳನ್ನೆಲ್ಲಾ ಮಾತಾಡಿಕೊಂಡು ಸಮಯ ಕಳೆಯುತ್ತಿದ್ದವು. ಮೂವರು ಎಷ್ಟೇ ಸ್ನೇಹಿತರಾಗಿದ್ದರೂ ಕತ್ತರಿಯ ಮನಸ್ಸಿನಲ್ಲಿ ಸೂಜಿಯ ಬಗ್ಗೆ ಒಂದು ತಾತ್ಸಾರ ಮನೋಭಾವ ಇತ್ತು, ಸದಾ ಏನಾದರೊಂದು ಕೊಂಕು ಮಾತನಾಡಿ ಸೂಜಿಗೆ ಬೇಸರ ಮಾಡುತ್ತಿತ್ತು.

ಹೀಗೆ ಒಮ್ಮೆ ಭೇಟಿಯಾದಾಗ ಬೇರೆಲ್ಲಾ ಮಾತುಕತೆಯ ನಡುವೆ ಕತ್ತರಿ ತನ್ನ ಕೊಂಕು ಬುದ್ಧಿಯನ್ನು ತೋರಿಸುತ್ತಾ ತಾನೇ ಸೂಜಿಗಿಂತ ಶ್ರೇಷ್ಠ ಎಂದಿತು.

ಸೌಮ್ಯ ಹಾಗೂ ಗಂಭೀರ ಸ್ವಭಾವದ ಬಟ್ಟೆ ಎಲ್ಲದಕ್ಕೂ ವಾದ ಮಾಡುತ್ತಿರಲಿಲ್ಲ, ತನ್ನ ಶ್ರೇಷ್ಠತೆಯ ಬಗ್ಗೆ ತನಗೆ ಅರಿವಿದ್ದ ಕಾರಣ ಹಾಗೂ ಬಟ್ಟೆಯ ಪ್ರಾಮುಖ್ಯತೆ ಜನರಿಗೆ ತಿಳಿದಿದ್ದ ಕಾರಣದಿಂದ ತನ್ನ ಬಗ್ಗೆ ತಾನೇ ಜಂಬ ಕೊಚ್ಚಿಕೊಳ್ಳದೆ ಮೌನವಾಗಿತ್ತು, ಅನವಶ್ಯಕವಾಗಿ ವಾದ ಮಾಡುವುದರಿಂದ ತನ್ನ ಘನತೆಗೆ ಧಕ್ಕೆ ಬರುವುದೆಂದು ತಿಳಿದ ಬಟ್ಟೆ ಗಂಭೀರವಾಗಿರುತ್ತಿತ್ತು, ಬಟ್ಟೆಯ ಗಂಭೀರತೆಯನ್ನು ನೋಡಿ ಕತ್ತರಿ ಅದರ ತಂಟೆಗೆ ಹೆಚ್ಚು ಹೋಗುತ್ತಿರಲಿಲ್ಲ, ಆದರೆ ಸೂಜಿ ಪಾಪ ಕತ್ತರಿಯ ಕೊಂಕು ಮಾತಿಗೆ ಸದಾ ಬೇಸರಪಡುತ್ತಿತ್ತು.

ಇದನ್ನೆಲ್ಲಾ ನೋಡಿ ಬಟ್ಟೆಗೆ ಒಂದು ಯೋಚನೆ ಹೊಳೆಯಿತು, ಕತ್ತರಿ ಮತ್ತು ಸೂಜಿಗೆ ನೀವಿಬ್ಬರೂ ನಿಮ್ಮ ನಿಮ್ಮ ಉಪಯೋಗ ಮತ್ತು ನಿಮ್ಮ ಶ್ರೇಷ್ಠತೆಯ ಬಗ್ಗೆ ಒಬ್ಬರ ನಂತರ ಒಬ್ಬರು ಹೇಳಿ, ನಿಮ್ಮ ಮಾತನ್ನೆಲ್ಲಾ ಕೇಳಿದ ಮೇಲೆ ನಾನು ಹೇಳುತ್ತೇನೆ ನಿಮ್ಮಲ್ಲಿ ಶ್ರೇಷ್ಠರು ಯಾರೆಂದು ಎಂದಿತು.

ಬಟ್ಟೆಯ ಮಾತಿಗೆ ಇಬ್ಬರೂ ಒಪ್ಪಿದರು, ಮೊದಲು ಕತ್ತರಿ ಶುರುಮಾಡಿತು, ಯಾವುದೇ ಬಟ್ಟೆಯಾಗಲಿ, ವಸ್ತುಗಳನ್ನಾಗಲಿ ಬೇರ್ಪಡಿಸುವ ಕೆಲಸಕ್ಕೆ ನಾವೇ ಬೇಕು. ಅನವಶ್ಯಕವಾದದ್ದನ್ನು ಕತ್ತರಿಸಲು ನಮ್ಮ ಸಹಾಯವೇ ಬೇಕು, ಚಿಕ್ಕ ಮಕ್ಕಳಿಂದ ದೊಡ್ಡವರ ತನಕವೂ ನನ್ನ ಉಪಯೋಗ ಅವಶ್ಯಕವಾಗಿದೆ, ಬೆರಳುಗಳ ಸಹಾಯದಿಂದ ಹಿಡಿದುಕೊಂಡು ನಮ್ಮನ್ನು ಉಪಯೋಗಿಸುವುದು ಬಹಳ ಸುಲಭ, ನಮಗೊಂದು ಆಕಾರವಿದೆ, ಗಾತ್ರವಿದೆ, ಬೇರೆ ಬೇರೆ ಬಣ್ಣಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುತ್ತೇವೆ ನಾವು ಎಂದಿತು.

ಬಟ್ಟೆ ಎಲ್ಲವನ್ನೂ ಕೇಳಿಸಿಕೊಂಡು ನಂತರ ಸೂಜಿಗೆ ಮಾತನಾಡಲು ಅವಕಾಶ ಕೊಟ್ಟಿತು. ಸೂಜಿ ತನ್ನ ವಾದ ಪ್ರಾರಂಭಿಸಿತು ನಾವಿಲ್ಲದೆ ಕತ್ತರಿಯ ಯಾವ ಕೆಲಸವೂ ಪೂರ್ಣವಾಗುವುದಿಲ್ಲ, ಬಟ್ಟೆಯನ್ನು ಕೇವಲ ಕತ್ತರಿಸಿದ ಮಾತ್ರಕ್ಕೆ ಅದು ಧರಿಸಲು ಯೋಗ್ಯವಾದ ಉಡುಪಾಗುವುದಿಲ್ಲ, ಅಲ್ಲಿ ನಾವೇ ಕೆಲಸ ಮಾಡಬೇಕು ಕತ್ತರಿಸಿ ಬೇರೆಯಾದ ತುಂಡುಗಳನ್ನು ಸರಿಯಾಗಿ ಜೋಡಿಸಿ ಹೊಲಿದರಷ್ಟೇ ಸುಂದರವಾದ ಉಡುಪು ತಯಾರಾಗುತ್ತದೆ, ಇನ್ನು ಜನರು ನಮ್ಮನ್ನು ತುಂಬಾ ಸೂಕ್ಷ್ಮವಾಗಿ ಉಪಯೋಗಿಸುತ್ತಾರೆ, ಮುಖ್ಯವಾಗಿ ನಮಗೆ ಚುಚ್ಚುವ ಕೆಲಸವಾದರೂ ನಮ್ಮದು ಶಾಂತ ಸ್ವಭಾವ, ನಮ್ಮ ಕೆಲಸ ಮಾಡುವಾಗ ಕತ್ತರಿಯ ಹಾಗೆ ಕರ ಕರ ಎಂದು ಊರಿಗೆಲ್ಲ ಗೊತ್ತಾಗುವ ಹಾಗೆ ಸದ್ದು ಮಾಡುವುದಿಲ್ಲ, ನಮ್ಮ ಕೆಲಸವನ್ನು ದೇವರ ಸೇವೆಯಂತೆ ನಿಶ್ಯಬ್ದ ವಾಗಿ ಮಾಡುತ್ತೇವೆ, ಮನುಷ್ಯರು 'ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ದವಾಗಿರಬೇಕು' ಎಂಬ ಮಾತನ್ನು ಆಗಾಗ ಹೇಳುತ್ತಾರೆ, ಬೇರೆ ಬೇರೆ ಗಾತ್ರದಲ್ಲಿ ನಾವು ಸಹ ಮಾರುಕಟ್ಟೆಯಲ್ಲಿ ಲಭ್ಯವಿರುತ್ತೇವೆ, ಒಟ್ಟಿನಲ್ಲಿ 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎನ್ನುವ ಮಾತು ನಮಗೆ ಒಪ್ಪುತ್ತದೆ. ಎಂದು ಸೂಜಿ ಮಾತು ಮುಗಿಸಿತು.

ಈ ಇಬ್ಬರ ಮಾತನ್ನು ಆಲಿಸಿದ ಬಟ್ಟೆ ತನ್ನ ಅಭಿಪ್ರಾಯವನ್ನು ಹೇಳತೊಡಗಿತು, ಇಬ್ಬರ ಮಾತನ್ನು ಕೇಳಿದಾಗ ನನಗನ್ನಿಸಿದ್ದು ನೀವಿಬ್ಬರೂ ನಿಮ್ಮ ನಿಮ್ಮ ಕೆಲಸದಲ್ಲಿ ಶ್ರೇಷ್ಠರೇ, ಯಾರೂ ಹೆಚ್ಚಲ್ಲ ಯಾರೂ ಕಡಿಮೆಯಲ್ಲ, ಏಕೆಂದರೆ ಕತ್ತರಿ ಕತ್ತರಿಸಿದರೆ ಮಾತ್ರ ಸೂಜಿಗೆ ಜೋಡಿಸುವ ಕೆಲಸ, ಸೂಜಿ ಜೋಡಿಸಿದರಷ್ಟೇ ಕತ್ತರಿಯ ಕೆಲಸ ಪೂರ್ಣವಾಗುವುದು, ಇಬ್ಬರಿಗೂ ನಿಮ್ಮದೇ ಆದ ಪ್ರಾಮುಖ್ಯತೆಯಿದೆ, ಗಾತ್ರ, ಆಕಾರ, ಬಣ್ಣ, ಬೇರೆ ಬೇರೆ ಇದ್ದರೂ ಇಬ್ಬರ ಅವಶ್ಯಕತೆಯೂ ಸಮಾಜಕ್ಕಿದೆ, ಯಾವುದೇ ವಸ್ತು, ಪ್ರಾಣಿ, ಪಕ್ಷಿ, ಸಸ್ಯಗಳಾಗಲಿ ಎಲ್ಲದಕ್ಕೂ ಅದರದೇ ಆದ ವಿಶೇಷತೆಗಳಿರುತ್ತವೆ, ಬಣ್ಣ, ಆಕಾರ, ಗಾತ್ರ ಯಾವುದೂ ಅದರ ಶ್ರೇಷ್ಠತೆಯನ್ನು ನಿರ್ಧರಿಸುವುದಿಲ್ಲ, ನಾವು ಅದನ್ನು ನೋಡುವ ರೀತಿ ಬದಲಾಗಬೇಕು ಅಷ್ಟೇ, ಪ್ರತಿಯೊಬ್ಬರನ್ನೂ ಗೌರವಿಸುವ ಶ್ರೇಷ್ಠ ಗುಣವನ್ನು ನಾವು ಬೆಳೆಸಿಕೊಳ್ಳಬೇಕು ಎಂದಿತು ಗಂಭೀರ ಸ್ವಭಾವದ ಬಟ್ಟೆ.

ಬಟ್ಟೆಯ ಮಾತನ್ನು ಕೇಳಿದ ಕತ್ತರಿ ಹಾಗೂ ಸೂಜಿಗೆ ತಮ್ಮ ತಪ್ಪಿನ ಅರಿವಾಯಿತು, ಇನ್ನು ಒಬ್ಬರಿಗೊಬ್ಬರು ಕೊಂಕು ನುಡಿಯದೆ, ಹೀಯಾಳಿಸದೆ ಸ್ನೇಹಿತರಾಗಿರೋಣ, ಪರಸ್ಪರ ಗೌರವಿಸೋಣ ಎಂದು ಒಳ್ಳೆಯ ಗೆಳೆಯರಾದರು. ■